ಅ) ದಿನಾಂಕ 31-3-1993.

ಆ) ಪ್ರಸ್ತಾವನೆಯು ಇಲಾಖೆಯಿಂದ ಈಗಾಗಲೇ ಸರ್ಕಾರಕ್ಕೆ ಬಂದಿದ್ದು, ಅದನ್ನು ಸಮಾಲೋಚಿಸಲು ಬೇರೆ ಇಲಾಖೆಗೆ ಕಳುಹಿಸಿರುತ್ತೆ. ಅದು ಅಲ್ಲಿಂದ ಬಂದ ತಕ್ಷಣವೇ ಸೂಕ್ತ ಆದೇಶ ಹೊರಡಿಸಲಾಗುವುದು.

ಬೈಂದೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರ

493 - ಶ್ರೀ ಐ.ಎಂ. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ನಗರ ನೀರು ಸರಬರಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪುರಸಭೆಗೆ ಹಸ್ತಾಂತರಗೊಳಿಸ ಬೇಕೆಂಬ ತೀರ್ಮಾನ ಕೈಗೊಳ್ಳಲಾಗಿದೆಯೇ? ಈ ತೀರ್ಮಾನ ಎಂದು ಕೈಗೊಳ್ಳಲಾಯಿತು, ಈ ತೀರ್ಮಾನ ಕೈಗೊಳ್ಳಲು ಕಾರಣಗಳೇನು?

ಆ) ಈ ತೀರ್ಮಾನ ಅನ್ವಯ ಹಸ್ತಾಂತರಗೊಳಿಸಲಾಯಿತೆ. ಹಸ್ತಾಂತರವನ್ನು ಪುರಸಭೆಯು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಂಡಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು ಈ ಕಾರಣಗಳು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯಾವಾಗ ಸರಿಪಡಿಸಿ ಬೈಂದೂರಿನ ಜನತೆಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಮಾಡುವುದು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬೈಂದೂರು ನೀರು ಸರಬರಾಜು ಯೋಜನೆಯನ್ನು ಈಗಾಗಲೇ ಹಸ್ತಾಂತರಿಸಲಾಗಿದೆ, ಮಂಡಳಿಯ ಸಂಹಿತೆಯ ಪ್ರಕಾರ ಜಲಮಂಡಳಿಯು ನೀರು ಸರಬರಾಜು ಯೋಜನೆಯನ್ನು ಕೈಗತ್ತಿಕೊಂಡು ಪೂರ್ಣಗೊಳಿಸಿದ ನಂತರ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕಾಗುತ್ತದೆ.

ಆ) ದಿನಾಂಕ : 17.10.1995 ರಂದು ಯೋಜನೆಯನ್ನು ಬೈಂದೂರು ಪುರಸಭೆಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರವನ್ನು ಪುರಸಭೆಯು ಒಪ್ಪಿಕೊಂಡಿದ್ದು ಹಸ್ತಾಂತರಗೊಳಿಸುವ ಸಮಯದಲ್ಲಿ ಯೋಜನೆಯು ಸಣ್ಣಪುಟ್ಟ ಕೆಲಸಗಳನ್ನು ಸರಿಪಡಿಸಿಕೊಡಬೇಕೆಂದು ಕೋರಿಕೆ ಸಲ್ಲಿಸಿರುತ್ತಾರೆ. ಮತ್ತು ಸಧ್ಯದಲ್ಲಿ ಕೆಲಸಗಳನ್ನು ಮುಗಿಸಲು ಪ್ರಸ್ತಾಪಿಸಲಾಗಿದೆ. ಪುರಸಭೆಯವರೇ ಈಗ ನೀರು ಸರಬರಾಜು ಪುರಸಭೆಯವರೇ ಈಗ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯ ಮಾಡುತ್ತಿರುತ್ತಾರೆ.

ಕಾಟಿಪಳ್ಳದಲ್ಲಿ ಅಂಬೇಡ್ಕರ್ - ಆಶ್ರಯ ಯೋಜನೆಗಳ ಮನೆಗಳು

494 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕು ಕಾಟಿಪಾಳ್ಳದಲ್ಲಿ ಪರಿಶಿಷ್ಟ ವರ್ಗದವರಿಗೆ ನಿರ್ಮಾಣವಾಗಿರುವ ಅಂಬೇಡ್ಕರ್ ಆಶ್ರಯ ಮನೆಗಳು ಎಷ್ಟು?